# ಶ್ರೀರಾಮಕೃಷ್ಣ ವಿದ್ಯಾಶಾಲೆ : ಒಂದು ಪಕ್ಷಿನೋಟ

**ಇಂದು ನಾಡಿನಾದ್ಯಂತ ಉತ್ತಮ ಶಿಕ್ಷಣಪ್ರದಾನಕ್ಕೆ ಪ್ರಸಿದ್ಧವಾಗಿರುವ ವಸತಿ ವಿದ್ಯಾಸಂಸ್ಥೆಯಾದ ಶ್ರೀರಾಮಕೃಷ್ಣ ವಿದ್ಯಾಶಾಲೆಯು ಇದೇ ಜನವರಿಯಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಈ ವಸತಿ ವಿದ್ಯಾಸಂಸ್ಥೆಯ ಒಂದು ಕಿರುಪರಿಚಯವನ್ನು ಕೊಡುವ ಈ ಲೇಖನವನ್ನು ವಿದ್ಯಾಶಾಲೆಯಿಂದ ಪಡೆದ ವಿವಿಧ ಮಾಹಿತಿಗಳಿಂದ ಸಂಗ್ರಹಿಸಲಾಗಿದೆ.**

## ಶುಭಾರಂಭ

**ಮೈ**ಸೂರಿನ ರಾಮಕೃಷ್ಣ ಆಶ್ರಮವು ೧೯೩೦ರಿಂದಲೂ ವಿವಿಧ ವಯೋಮಿತಿಯ ವಿದ್ಯಾರ್ಥಿಗಳಿಗೆ ವಸತಿನಿಲಯವನ್ನು ನಡೆಸುತ್ತಿತ್ತು. ಇದಕ್ಕಾಗೆಂದೇ ನಗರದ ಪ್ರಸಿದ್ಧ ವಕೀಲರೂ, ಜನೋಪಕಾರಿಗಳೂ ಆದ ಸನ್ಮಾನ್ಯ ಶ್ರೀರಂಗಾಚಾರ್ ಅವರು ಆಶ್ರಮದ ಹಿಂಭಾಗದಲ್ಲಿದ್ದ ಒಂದು ಸಣ್ಣ ಮನೆಯನ್ನು ದಾನವಾಗಿ ನೀಡಿದ್ದರು. ಮೊದಮೊದಲು ಕೇವಲ ಐದಾರು ಮಂದಿ ವಿದ್ಯಾರ್ಥಿಗಳು ಮಾತ್ರ ನೆಲಸಿದ್ದ ಈ ವಸತಿ ನಿಲಯದಲ್ಲಿ ಕ್ರಮೇಣ ಸಂಖ್ಯೆ ಇಪ್ಪತ್ತೈದನ್ನು ಮುಟ್ಟಿತು. ಈಗ ಹೊಸತೊಂದು ಸ್ಥಳಕ್ಕೆ ವರ್ಗಾಯಿಸುವ ಯೋಚನೆಗೆ ದಾರಿಮಾಡಿಕೊಟ್ಟಿತು. ೧೯೪೧ರಲ್ಲಿ ಮೈಸೂರು ಆಶ್ರಮದ ಅಧ್ಯಕ್ಷ ಸ್ಥಾನಕ್ಕೆ ಬಂದರು—ದೂರದರ್ಶಿಯೂ ಅದ್ಭುತ ಕಲ್ಪನಾಕಾರರೂ ಧೈರ್ಯಶಾಲಿಗಳೂ ಉತ್ಸಾಹಿಗಳೂ ಈಗಿನ ವಿದ್ಯಾಶಾಲೆಯ ಚರಿತ್ರೆಯಲ್ಲಿ ದಂತಕಥೆಯಾಗಿ ಸೇರಿಹೋದವರೂ ಆದ ಸ್ವಾಮಿ ಶಾಂಭವಾನಂದರು. ವಿದ್ಯಾರ್ಥಿ ವಸತಿನಿಲಯಕ್ಕಾಗಿ ಆಶ್ರಮದ ಆಸು-ಪಾಸಿನಲ್ಲೇ ಒಂದು ದೊಡ್ಡ ನಿವೇಶನಕ್ಕಾಗಿ ಅನ್ವೇಷಣೆಯಲ್ಲಿದ್ದ ಸ್ವಾಮಿಗಳ ಕಣ್ಣಿಗೆ ಬಿದ್ದದ್ದು ರಸ್ತೆಯ ಆ ಪಕ್ಕದಲ್ಲಿದ್ದ ಯಾದವಗಿರಿಯ ರೈಲ್ವೇ ಕಾಲೋನಿಗೆ ಸೇರಿದ ಜಮೀನು. ಆದರೆ ಇದಕ್ಕಾಗಿ ಇದ್ದ ನಿಧಿ ಸಂಗ್ರಹವೋ ಅತ್ಯಲ್ಪ. ನಿಧಿಯಿಲ್ಲದಿದ್ದರೂ ವಿಧಿರಾಯನೇ ಸ್ವಾಮಿಗಳ ಪರ ವಹಿಸಿದ್ದ. ಮೈಸೂರು ನಗರಪಾಲಿಕೆಯ ಅಧಿಕಾರಿಗಳ ಹಾಗೂ ಅಲ್ಲಿ ಆಗಲೇ ವಾಸ್ತವ್ಯ ಹೂಡಿದ್ದ ಕೆಲವು ಖಾಸಗಿ ಮನೆ ಮಾಲೀಕರ ಮನ ಒಲಿಸಿ ಸುಮಾರು ೨೦ ಎಕರೆ ವಿಸ್ತೀರ್ಣವುಳ್ಳ ಜಮೀನನ್ನು ಪಡೆಯುವುದರಲ್ಲಿ ಸಫಲರಾದರು ಸ್ವಾಮಿ ಶಾಂಭವಾನಂದರು! ಆದರೆ ಆಗ ಅದು ಒಂದು ಬಂಜರು ಭೂಮಿಯಾಗಿತ್ತು!

## ವಿದ್ಯಾಶಾಲೆಯ ಉದಯ

ನೂತನ ವಿದ್ಯಾರ್ಥಿನಿಲಯವೇನೋ ೧೯೫೧ರಲ್ಲಿ ಪೂರ್ಣಗೊಂಡಿತು. ಈಗ ಪೂಜ್ಯ ಸ್ವಾಮೀಜಿಯವರಿಗೆ ಇನ್ನೊಂದು ಯೋಚನೆ ಮನಸ್ಸಿಗೆ ಬಂತು—ಈ ವಿದ್ಯಾರ್ಥಿಗಳು ಇಲ್ಲಿಂದ ದೂರದೂರದ ಶಾಲಾಕಾಲೇಜುಗಳಿಗೆ ಬಹಳ ಪ್ರಯಾಸದಿಂದ ಹೋಗಬೇಕಾಗಿ ಬಂದದ್ದರಿಂದ ಇಲ್ಲೇ ಏಕೆ ಒಂದು ವಸತಿ ಶಾಲೆಯನ್ನೇ ತೆರೆಯಬಾರದು? ಆದರೆ ನಿಧಿ? ಪುನಃ ಅದೇ ಸಮಸ್ಯೆ! ಸ್ವಾಮಿಗಳ ದುರ್ದಮ ಇಚ್ಛಾಶಕ್ತಿಗೆ ಸಮಸ್ಯೆಯೇ ಆಜ್ಯವಾಯಿತು. ನಿಧಿ ಸಂಗ್ರಹವಾಯಿತು. ೧೯೫೩ರಲ್ಲಿ "ಶ್ರೀರಾಮಕೃಷ್ಣ ವಿದ್ಯಾಶಾಲೆ" ಎಂಬ ಆವಾಸೀ ಶಾಲೆಯೊಂದರ ಉದಯವಾಯಿತು.



*ಸ್ವಾಮಿ ಶಾಂಭವಾನಂದರು*

ವಿದ್ಯಾಶಾಲೆಯೆಂಬುದು ಸ್ವಾಮಿಗಳ ಕಲ್ಪನೆಯಲ್ಲಿ ಬರಿಯ ಶಾಲೆಯಾಗಿರಲಿಲ್ಲ. ಸ್ವಾಮಿ ವಿವೇಕಾನಂದರ ಶಿಕ್ಷಣ ನೀತಿಯನ್ನು ಕಾರ್ಯರೂಪಕ್ಕೆ ತರುವ, ವಿದ್ಯಾರ್ಥಿಗಳಲ್ಲಿ ಆದಾಗಲೇ ಸುಪ್ತವಾಗಿರುವ ಪರಿಪೂರ್ಣತೆಯ ವ್ಯಕ್ತತೆಗೆ ಸಹಾಯ ಮಾಡುವ ಒಂದು ವ್ಯವಸ್ಥೆಯಾಗಿತ್ತು. ಹೀಗೆ ಮೈಸೂರಿನ ರಾಮಕೃಷ್ಣ ಆಶ್ರಮದ ಪ್ರಮುಖ ಚಟುವಟಿಕೆಗಳಲ್ಲಿ ಒಂದಾದ ವಸತಿ ಶಾಲೆಯು ಅಸ್ತಿತ್ವಕ್ಕೆ ಬಂದಿತು. ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವದ ಬೆಳವಣಿಗೆಗೆ ಬೇಕಾದ ಶಾಲಾದಿನಚರಿಯ ರೂಪುರೇಷೆಗಳು ಸಿದ್ಧಗೊಂಡವು.

## ಸುವ್ಯವಸ್ಥಿತ ಬೆಳವಣಿಗೆ

ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಸಮರ್ಥ ಶಿಕ್ಷಕರ ನೇಮಕಾತಿ (ಪ್ರಸ್ತುತ ಪ್ರತಿ ೧೫ಮಂದಿ ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರು), ವಿಶಾಲವಾದ ಮಲಗುವ ಕೋಣೆಗಳು, ೧೬,೦೦೦ ಗ್ರಂಥಗಳನ್ನೊಗೊಂಡ ಕಂಪ್ಯೂಟರೀಕರಿಸಿದ ಗ್ರಂಥಸೂಚಿಯನ್ನು ಹೊಂದಿರುವ ಗ್ರಂಥಾಲಯ, ಔಷಧಾಲಯ, ರೋಗಿ ಶುಶ್ರೂಷೆಗಾಗಿ ಒಂದು ಕೋಣೆ, ಎಲೆಕ್ಟ್ರಿಕ್ ಬೇಕರಿ, ದಂತಚಿಕಿತ್ಸೆಗಾಗಿ ಅನುಕೂಲವಾದ ಕುರ್ಚಿ, ನೇತ್ರಪರೀಕ್ಷಣ ಕೋಣೆ, ಹಬೆಚಾಲಿತ ಅಡುಗೆ ಸಾಧನಗಳು, ವಿಶಾಲವಾದ ಪ್ರಾರ್ಥನಾಮಂದಿರ, ಹೊಲಿಗೆ ವಿಭಾಗ, ವಿದ್ಯಾರ್ಥಿಗಳ ದೈನಂದಿನ ಅಗತ್ಯಗಳನ್ನು ಪೂರೈಸುವ ಉಗ್ರಾಣ, ಆಧುನಿಕ ಬಟ್ಟೆ ಒಗೆಯುವ ಯಂತ್ರಗಳು, ಆಧುನಿಕ



ಯೋಗಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು.

ವಿಜ್ಞಾನ ಪ್ರಯೋಗಾಲಯ. ಸುಸಜ್ಜಿತವಾದ ಸಭಾಂಗಣ, ಯಾವುದೇ ವಿದ್ಯಾಸಂಸ್ಥೆಯಲ್ಲೂ ವಿರಳವಾದ ಈಜುಕೊಳ, ಕಂಪ್ಯೂಟರ್ "ಸೆಲೆಸ್ಟ್ರೋನ್-14" ಹಾಗೂ ಕಂಪ್ಯೂಟರ್ "ಸೆಲೆಸ್ಟ್ರೋನ್-8" ದೂರದರ್ಶಕ ಯಂತ್ರಗಳನ್ನು ಹೊಂದಿರುವ ವೀಕ್ಷಣಾಲಯ, ಅತ್ಯಾಧುನಿಕ ಸಲಕರಣೆಗಳನ್ನು ಹೊಂದಿರುವ ವ್ಯಾಯಾಮಶಾಲೆ, ಟಿಷ್ಯೂಕಲ್ಚರ್ ಪ್ರಯೋಗಾಲಯಗಳು ಕಾಲ ಕ್ರಮೇಣ ವಿದ್ಯಾರ್ಥಿಗಳ ಶಿಕ್ಷಣ ಸಾಧನಗಳಾಗಿ ಸೇರಿಕೊಂಡವು.

ಇವುಗಳಲ್ಲದೆ ವಿದ್ಯಾಶಾಲೆಯ ಪರಿಸರವನ್ನು ವಿದ್ಯಾರ್ಥಿಗಳಿಗೆ ಆಪ್ಯಾಯಮಾನವಾಗಿಸುವ "ನಿಸರ್ಗ ನಿಕೇತನ"ವೆಂಬ ಹೆಸರಿನ ವಿಶಿಷ್ಟ ತರಗತಿ ಕೋಣೆ, ೨೨ ಆಟದ ಮೈದಾನಗಳನ್ನು (ಒಂದು ದೊಡ್ಡ ಕ್ರೀಡಾಂಗಣವನ್ನೂ ಸೇರಿದಂತೆ) ತನ್ನಲ್ಲಿ ಅಡಕಮಾಡಿಕೊಂಡಿರುವ, ವಿವಿಧ ಪಕ್ಷಿಸಂಕುಲಕ್ಕೆ ಆಸರೆಯಾಗಿರುವ ೨೫೫ ಕ್ಕೂ ಹೆಚ್ಚು ಜಾತಿಯ ಗಿಡಮರಗಳನ್ನು ಹೊಂದಿರುವ ವಿಶಾಲ ತೋಟ —ಇವುಗಳೂ ಇವೆ. ಒಮ್ಮೆ ಬಂಜರಾಗಿದ್ದ ಈ ವಿದ್ಯಾಶಾಲೆ ಇಂದು ಹಚ್ಚಹಸಿರಾಗಿ ಕಂಗೊಳಿಸುತ್ತಿದ್ದರೆ ಅದಕ್ಕೆ ಮೈಸೂರು ಆಶ್ರಮದ ಪೂರ್ವ ಅಧ್ಯಕ್ಷರೂ, ವಿದ್ಯಾಶಾಲೆಯ ಪೂರ್ವ ಮೇಲ್ವಿಚಾರಕರೂ ಆಗಿದ್ದ ಸ್ವಾಮಿ ಸುರೇಶಾನಂದರ ಆಸಕ್ತಿ, ಉತ್ಸಾಹ ಹಾಗೂ ಶ್ರಮಗಳೇ ಕಾರಣ. ಇದಲ್ಲದೆ ವಿದ್ಯಾರ್ಥಿಗಳಿಗೆ ಪ್ರತಿನಿತ್ಯವೂ ಶುದ್ಧವಾದ ಹಾಲನ್ನು ಪೂರೈಸುವ ಒಂದು ಗೋಶಾಲೆಯನ್ನೂ ಹೊಂದಿರುತ್ತದೆ.

## ಆಯ್ಕೆ, ಶಿಕ್ಷಣ ಪದ್ಧತಿ

ವಿದ್ಯಾರ್ಥಿಗಳನ್ನು ೮ನೆ ಹಾಗೂ ಮೊದಲನೆ ಪಿ.ಯು.ಸಿ.ಗಳಿಗೆ ಆಯ್ದುಕೊಳ್ಳುವುದು ಕೇವಲ ಅರ್ಹತೆಯ ಆಧಾರದ ಮೇಲೆ. ಹಿಂದಿನ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ವಿದ್ಯಾಶಾಲೆ ನಡೆಸುವ ಪ್ರವೇಶ ಪರೀಕ್ಷೆ ಹಾಗೂ ಸಂದರ್ಶನಗಳಲ್ಲಿ ಉತ್ತಮ ಅಂಕ ಗಳಿಸಿದರೆ ಅದರ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿವರ್ಷವೂ ಶೇಕಡ ೮ ರಿಂದ ೧೦ರಷ್ಟು ವಿದ್ಯಾರ್ಥಿಗಳು ಸಮಾಜಕಲ್ಯಾಣ ಇಲಾಖೆಯ ವತಿಯಿಂದ ಆಯ್ಕೆಗೊಳ್ಳುತ್ತಾರೆ. ಇಂತಹ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಶಾಲೆಯು ಪ್ರತಿವರ್ಷವೂ ವಿವಿಧ ವ್ಯಾಸಂಗ ವೇತನ ಯೋಜನೆಯಡಿಯಲ್ಲಿ ಸುಮಾರು ೫ ರಿಂದ ೬ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತದೆ. ಶೇಕಡ ೬೦ರಷ್ಟು ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳಿಂದ ಆಯ್ಕೆಗೊಳ್ಳುತ್ತಾರೆ. ೧೦ ರಿಂದ ೨೦ ವಿದ್ಯಾರ್ಥಿಗಳು ಪ್ರತಿವರ್ಷ ಹೊರರಾಜ್ಯಗಳಿಂದ ಬಂದು ಇಲ್ಲಿ ವಿದ್ಯಾಭ್ಯಾಸ ಪಡೆಯುತ್ತಾರೆ.

ಶಾಲೆಯು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಪಠ್ಯಕ್ರಮವನ್ನು ಅನುಸರಿಸುತ್ತದೆ. ಪ್ರತಿವರ್ಷವೂ ಶೇಕಡ ೧೦೦ರಷ್ಟು ಫಲಿತಾಂಶವಿದ್ದು ಅಂಕಗಳ ಸರಾಸರಿ ಶೇಕಡ ೮೦ರಿಂದ ೮೬ರಷ್ಟಿರುತ್ತದೆ. ಸಾಂಪ್ರದಾಯಿಕ ಗುರುಕುಲ ಪದ್ಧತಿ ಹಾಗೂ ಆಧುನಿಕ ವೈಜ್ಞಾನಿಕ ಮನೋಭಾವಗಳೆರಡನ್ನೂ ವಿದ್ಯಾಶಾಲೆಯು ತನ್ನ ಶಿಕ್ಷಣಪದ್ಧತಿಯಲ್ಲಿ ಸಾಮರಸ್ಯದಿಂದ ಅಳವಡಿಸಿದೆ. ಪ್ರತಿದಿನವೂ ಬೆಳಿಗ್ಗೆ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣದ ಪಾಠಗಳು ದೊರೆಯುತ್ತವೆ. ಇದಲ್ಲದೆ ಸಂಜೆಯ ಕ್ರೀಡೆಗಳೂ ವಿದ್ಯಾರ್ಥಿಗಳ ಮೈಮನಗಳನ್ನು ಆರೋಗ್ಯವಾಗಿಡಲು ಸಹಾಯ ಮಾಡುತ್ತವೆ. ನಿಯತಕಾಲಿಕ ಸ್ಪರ್ಧೆಗಳೂ, ಪ್ರತಿಭಾ ಪ್ರದರ್ಶನಗಳೂ ವಿದ್ಯಾರ್ಥಿಯಲ್ಲಡಗಿರುವ ಪ್ರತಿಭೆಯನ್ನು ಹೊರಗೆಡಹಲು ಅನುವು ಮಾಡಿಕೊಡುತ್ತವೆ. ಇದಲ್ಲದೆ ವಿದ್ಯಾರ್ಥಿಗಳು ಶಾಲೆಯು ನೀಡುವ ಕೆಲವು ಆಯ್ದ ಹವ್ಯಾಸಗಳಲ್ಲಿ ತರಬೇತಿಯನ್ನು ಪಡೆಯಲು ಅನುಕೂಲವಿದೆ. ವಿದ್ಯಾರ್ಥಿಗಳು ವಾಸಿಸುವ ಪ್ರತಿಯೊಂದು ಬ್ಲಾಕಿಗೂ ಒಬ್ಬ ಸಂನ್ಯಾಸಿ ಅಥವಾ ಬ್ರಹ್ಮಚಾರಿಗಳು ಮೇಲ್ವಿಚಾರಕರಾಗಿರುತ್ತಾರೆ. ಹೀಗಾಗಿ ಅವರಿಗೆ ಮಕ್ಕಳ ವೈಯಕ್ತಿಕ ನಡತೆ, ಹವ್ಯಾಸ, ಮಾತು-ಕತೆಗಳ ಸಂಪೂರ್ಣ ಪರಿಚಯವಿದ್ದು ಆಗಾಗ ಅವುಗಳನ್ನು ತಿದ್ದುವ ಸಲಹೆಗಳನ್ನು ನೀಡುತ್ತಾರೆ. ಪ್ರತಿ ಬೆಳಿಗ್ಗೆ ಹಾಗೂ ಸಂಜೆ ವಿದ್ಯಾರ್ಥಿಗಳು ಒಟ್ಟಿಗೆ ಕಲೆತು ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥನೆ ಮಾಡುವುದರಿಂದ ಅವರಲ್ಲಿರುವ ಅಂತಃಶಕ್ತಿಯನ್ನು ಜಾಗೃತಗೊಳಿಸಲು, ಪರಸ್ಪರ ಸೌಹಾರ್ದತೆಯನ್ನು ಹೆಚ್ಚಿಸಲು ಅವಕಾಶವಿರುತ್ತದೆ.

ವಿದ್ಯಾರ್ಥಿಗಳಲ್ಲಿ ಸಹಮಾನವರನ್ನು ಕುರಿತ ಅನುಕಂಪೆ ಮೂಡಿಸಲು "ನಾರಾಯಣ ಸೇವೆ" ಅಥವಾ "ಬಡವರ ಬಂಧು" ಎಂಬ ಶೈಕ್ಷಣಿಕ ಕಾರ್ಯಕ್ರಮವನ್ನು ಶಾಲೆಯು ಹಮ್ಮಿಕೊಂಡಿದೆ.




ಡಾ. ಅಬ್ದುಲ್ ಕಲಾಮ್ ಭೇಟಿಕೊಟ್ಟಾಗ, ಎಡದಿಂದ ಶಾಲೆಯ ಪ್ರಿನ್ಸಿಪಾಲ್ ಶ್ರೀ ಬಾಲಾಜಿ, ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಮತ್ತು ಶಾಲೆಯ ಮುಖ್ಯಸ್ಥರಾದ ಸ್ವಾಮಿ ಮುಕ್ತಿದಾನಂದಜಿ

ಮೈಸೂರಿನ ಕುಂಬಾರಕೊಪ್ಪಲು ಎಂಬಲ್ಲಿ, ಕೊಳಗೇರಿಯ ಜನರಿಗೆ ಮೂಲ ಸೌಕರ್ಯಗಳನ್ನು ವಿದ್ಯಾರ್ಥಿಗಳೇ ತಮ್ಮ ಹಣದಿಂದ ಒದಗಿಸಿಕೊಟ್ಟು, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಮಾಡುವುದು ಈ ಶೈಕ್ಷಣಿಕ ಕಾರ್ಯಕ್ರಮದ ವೈಶಿಷ್ಟ್ಯ. ಇದರಿಂದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಳಕಳಿಯು ಮೂಡುವಂತಾಗುದೆ.

ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಹಾಗೂ ಸಮೂಹದ ಇತರ ಸದಸ್ಯರೊಂದಿಗೆ ಕಲೆತು ಕೆಲಸಮಾಡುವ ಗುಣಗಳನ್ನು ರೂಪಿಸಿ, ಸಹಕಾರ ಬಾಳ್ವೆಯ ಶಿಕ್ಷಣ ಈ ಶಾಲೆಯ ಮತ್ತೊಂದು ವೈಶಿಷ್ಟ್ಯ. ಪ್ರತಿವರ್ಷವೂ ವಿದ್ಯಾರ್ಥಿ ಮಂಡಲಿಯ ಸದಸ್ಯರನ್ನೂ, ಕಾರ್ಯದರ್ಶಿಗಳನ್ನೂ, ಅಧ್ಯಕ್ಷರನ್ನೂ ಚುನಾಯಿಸುವ ಪರಿಪಾಠವಿದೆ. ಚುನಾಯಿತ ಅಭ್ಯರ್ಥಿಗಳು ಶಾಲೆಯ ಮೇಲ್ವಿಚಾರಕ ಸಂನ್ಯಾಸಿಗಳ, ಶಿಕ್ಷಕರ ಮಾರ್ಗದರ್ಶನದಂತೆ ೧೭ ಇಲಾಖೆಗಳನ್ನು ತಮ್ಮ ಕಾರ್ಯದರ್ಶಿಗಳ ಸಹಾಯದಿಂದ ನಡೆಸುತ್ತಾರೆ. ಇವುಗಳಲ್ಲಿ ಪ್ರಾರ್ಥನಾಮಂದಿರ, ಬಡಿಸುವುದು, ಕ್ರೀಡೆ, ಕಂಪ್ಯೂಟರ್ ವಿಭಾಗ, ಸಂಗೀತ ವಿಭಾಗ, ಗ್ರಂಥಾಲಯವೇ ಮೊದಲಾದ ಪ್ರಮುಖ ಇಲಾಖೆಗಳು ಸೇರಿವೆ. ವರ್ಷದಲ್ಲಿ ಒಂದು ದಿನ ವಿದ್ಯಾರ್ಥಿಗಳದ್ದೇ ಆದ "ಸ್ವ-ಆಡಳಿತ ದಿನ"ವನ್ನು ಆಚರಿಸಲಾಗುತ್ತದೆ.

ಪ್ರತಿ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿವರ್ಷವೂ ಪ್ರವಾಸವನ್ನು ಆಯೋಜಿಸಲಾಗುತ್ತದೆ. ವಿದ್ಯಾರ್ಥಿಗಳಲ್ಲಿ ಚಾರಿತ್ರ್ಯವನ್ನು ರೂಪಿಸಲು, ಪ್ರತಿವರ್ಷವೂ ಹತ್ತನೆಯ ಹಾಗೂ ಪಿ.ಯು.ಸಿ. ಹುಡುಗರಿಗೆ ಮೂರು ದಿನಗಳ ವಿಶೇಷ ಶಿಬಿರಗಳನ್ನು ನಡೆಸಲಾಗುತ್ತದೆ. ಇವುಗಳನ್ನು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಪ್ರಶಾಂತ ಪರಿಸರದಲ್ಲಿ ನಡೆಸಲಾಗುತ್ತದೆ. ಆಧ್ಯಾತ್ಮಿಕ, ಧಾರ್ಮಿಕ ಅಥವಾ ರಾಷ್ಟ್ರ ಮುಖಂಡರ, ಪ್ರಸಿದ್ಧ ವಿಜ್ಞಾನಿಗಳ ಅಥವಾ ಸಮಾಜಸೇವಕರ ಜೀವನಗಳಲ್ಲಿ ವ್ಯಕ್ತವಾಗಿರುವ ಧೈರ್ಯ, ನಿಃಸ್ವಾರ್ಥತೆ, ಸತ್ಯಸಂಧತೆ, ವೈಜ್ಞಾನಿಕ ಮನೋಭಾವಗಳೇ ಮೊದಲಾದ ಗುಣಗಳಿಗೆ ಒತ್ತು ನೀಡಿ ವಿಸ್ತೃತವಾದ ಅಧ್ಯಯನ ನಡೆಸಲಾಗುತ್ತದೆ. ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಭಾರತೀಯ ಸಂಸ್ಕೃತಿ, ತತ್ತ್ವಶಾಸ್ತ್ರ ಹಾಗೂ ತುಲನಾತ್ಮಕ ಧರ್ಮಗಳ ಅಧ್ಯಯನಗಳೇ ಮುಖ್ಯ ವಿಷಯಗಳಾಗಿರುತ್ತವೆ.

ಇಷ್ಟೇ ಅಲ್ಲದೆ ರಾಷ್ಟ್ರೀಯ ವಿಶೇಷ ದಿನಗಳನ್ನೂ, ಹಬ್ಬಹರಿದಿನಗಳನ್ನೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಶಾಲೆಯಲ್ಲಿ ಪ್ರತಿವರ್ಷವೂ ಆಚರಿಸಲಾಗುತ್ತದೆ. ವಿದ್ಯಾಶಾಲೆಯು ವಿದ್ಯಾರ್ಥಿಗಳ ಲೇಖನ, ಚಿತ್ರಕಲೆಯಂತಹ ಪ್ರತಿಭೆಯನ್ನು ಪ್ರೋತ್ಸಾಹಿಸಲು "ಪ್ರತಿಭಾ" ಎಂಬ ವಾರ್ಷಿಕ ಪತ್ರಿಕೆಯನ್ನೂ ಪತ್ರಿಕೆಯ ಹಸ್ತಲಿಪಿಯ ಪ್ರತಿಗಳನ್ನೂ ಹೊರತರುತ್ತದೆ.

ವಿದ್ಯಾಶಾಲೆಯ ಮತ್ತೊಂದು ಪ್ರಮುಖ ಅಂಗವೆಂದರೆ "ಹಳೆಯ ವಿದ್ಯಾರ್ಥಿಗಳ ಸಂಘ". ಬಹುಶಃ ಬೇರಾವ ವಿದ್ಯಾಸಂಸ್ಥೆಯಲ್ಲೂ ಇಷ್ಟು ಪ್ರಬಲವಾದ "ಹಳೆಯ ವಿದ್ಯಾರ್ಥಿಗಳ ಜಾಲ"ವೊಂದು ಸಿಗುವುದು ಕಷ್ಟವೆಂದೇ ಹೇಳಬೇಕು. ಈಗಾಗಲೇ ೨೮೦೦ ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಇವರಿಂದ ವಿದ್ಯಾಶಾಲೆಯು ಈಗಲೂ ಒಂದಲ್ಲ ಒಂದು ಬಗೆಯ ಸೇವೆಯನ್ನು ಸ್ವೀಕರಿಸುತ್ತಿದೆ. ಈಗ ಸುವರ್ಣ ಮಹೋತ್ಸವದ ನೆನಪಿಗಾಗಿ ತಲೆ ಎತ್ತಿರುವ ನೂತನ ಕಟ್ಟಡ ನಿರ್ಮಾಣಕ್ಕೆ ಶೇಕಡ ೫೦ರಷ್ಟು ಧನಸಹಾಯ ಹಳೆಯ ವಿದ್ಯಾರ್ಥಿಗಳಿಂದಲೇ ಬಂದಿರುತ್ತದೆ. ಸಂಘವು ವರ್ಷಕ್ಕೆರಡು ಸಲ "ವಾಯ್ಸ್ ಆಫ್ ವಿದ್ಯಾಶಾಲೆ ಅಲಮ್ನಿ" ಎಂಬ ಹೆಸರಿನ ವಾರ್ತಾಪತ್ರಿಕೆಯನ್ನು ಪ್ರಕಟಿಸುತ್ತದೆ. ಪ್ರತಿವರ್ಷವೂ ವಾರ್ಷಿಕ ಸಭೆಯನ್ನು ನಡೆಸುತ್ತದೆ.



ಬಾಸ್ಕೆಟ್ ಬಾಲ್ ಆಡುತ್ತಿರುವ ವಿದ್ಯಾರ್ಥಿಗಳು

೨೦೦೩-೨೦೦೪, ವಿದ್ಯಾಶಾಲೆಯ ಸುವರ್ಣಮಹೋತ್ಸವ ವರ್ಷದ ನೆನಪಿಗಾಗಿ ಶಾಲೆಯ ಸಭಾಂಗಣದ ಪಕ್ಕದಲ್ಲೇ ನಿರ್ಮಾಣವಾಗಿರುವ ಈ ಸುಂದರ ಕಟ್ಟಡ ಪಿ.ಯು.ಸಿ. ವಿದ್ಯಾರ್ಥಿಗಳ ವಸತಿಗೆಂದೇ ಕಟ್ಟಲಾಗಿದೆ. ಈ ಕಟ್ಟಡದಲ್ಲಿ ವಿಶಾಲವಾದ ಕೋಣೆಗಳೂ ಹಾಗೂ ಪ್ರಾರ್ಥನಾಮಂದಿರವೂ ಇವೆ.

ಈ ಶಾಲೆಗೆ ಭೇಟಿ ನೀಡಿದ ರಾಷ್ಟ್ರದ ಗಣ್ಯವ್ಯಕ್ತಿಗಳು, ಶಾಲೆಯ ಶಿಸ್ತು ಹಾಗೂ ಶಿಕ್ಷಣದ ಗುಣಮಟ್ಟವನ್ನು ಕಂಡು ಮನಸಾರೆ ಕೊಂಡಾಡಿದ್ದಾರೆ. ".... ನನ್ನ ಹೃದಯಕ್ಕೆ ಬಹಳ ಹತ್ತಿರವಾಗಿರುವ ಶ್ರೀರಾಮಕೃಷ್ಣ ವಿದ್ಯಾಶಾಲೆಯಂತಹ ಸ್ಥಳದಲ್ಲಿರಲು ನನಗೆ ಬಹಳ ಆನಂದವಾಗುತ್ತದೆ. ಇಲ್ಲಿ ವಿಜ್ಞಾನ, ಆಧ್ಯಾತ್ಮಿಕತೆಗಳೆರಡೂ ಜೊತೆ ಜೊತೆಯಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ರೀತಿಯ ಮೌಲ್ಯವ್ಯವಸ್ಥೆಯು ಬಹಳ ಮುಖ್ಯವಾದದ್ದು...." ಎನ್ನುತ್ತಾರೆ ಈಗಿನ ರಾಷ್ಟ್ರಪತಿಗಳಾದ ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್.

ವಿದ್ಯಾಶಾಲೆಯು ಐವತ್ತು ವರ್ಷಗಳಲ್ಲಿ ಇಷ್ಟೆಲ್ಲ ಜನಪ್ರಿಯತೆಗೆ ಪಾತ್ರವಾಗಿದ್ದರೆ ಅದಕ್ಕೆ ಕಾರಣ ಈ ಸಂಸ್ಥೆಗಾಗಿ ಅಹೋರಾತ್ರಿ, ಸೇವಾಮನೋಭಾವದಿಂದಲೂ ಪೂಜಾ ಮನೋಭಾವದಿಂದಲೂ, ಶ್ರಮಿಸಿದ ಸಂನ್ಯಾಸಿಗಳು, ಶಿಕ್ಷಕರು, ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಹಿತೈಷಿಗಣಗಳು ಎಂಬುದನ್ನು ಗಮನದಲ್ಲಿಡಬೇಕು. ಸಮಗ್ರ ಶಿಕ್ಷಣದಿಂದ ಆರೋಗ್ಯಕರ ಸಮಾಜದ ನಿರ್ಮಾಣಕಾರ್ಯದಲ್ಲಿ ಅವಿರತವಾಗಿ ಶ್ರಮಿಸುತ್ತಿರುವ ಶ್ರೀರಾಮಕೃಷ್ಣ ವಿದ್ಯಾಶಾಲೆಯು ಚಿರಕಾಲ ಸ್ವಾಮಿ ವಿವೇಕಾನಂದರ ಧ್ಯೇಯ ಸಾಧನೆಗೆ ಸಮರ್ಥ ಉಪಕರಣವಾಗಲಿ ಎಂದು ಹಾರೈಸೋಣ. ◆